ಓ.ಎಸ್.ನಂ.14/11
ಪಿ.ಡಬ್ಲ್ಯೂ-2

<u>ಸಾಕ್ಷಿಯನ್ನು ದಿಃ **07.10.2023** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ 4 ರಿಂದ 13 ನೇ ಪ್ರತಿವಾದಿ ಪರ ಶ್ರೀ.ಎಂ.ಜಿ. ವಕೀಲರಿಂದ.</u>

ನಾನು ಪಿ.ಯು ಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ ನನ್ನ ಜನ್ಮ ದಿನಾಂಕ 06.07.1976 ಆಗಿರುತ್ತದೆ. 1 ಮತ್ತು 4 ನೇ ವಾದಿಯವರು ಮರಣ ಹೊಂದಿದ್ದು ಉಳಿದವರು ಜೀವಂತ ವಿರುತ್ತಾರೆ. ಉಳಿದ ವಾದಿಯ ಪರವಾಗಿ ನಾನೇ ಸಾಕ್ಷಿ ನುಡಿಯುತ್ತಿದೇನೆ ನಾನು ಮತ್ತು ಉಳಿದ ವಾದಿಯವರರು ಒಂದೇ ಕುರುಂಬದವರು ಆಗಿರುತ್ತೇವೆ. ವಾದಿ 2 ರಿಂದ 4 ಮತ್ತು 6 ಅವರ ಜನ್ಮ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಅವರು ಎಲ್ಲರೂ ಸಹ ವಿಧ್ಯಾಭಾಸ ಮಾಡಿರುತ್ತಾರೆ. ನನ್ನ ತಂದೆ ಸರ್ಕಾರದಿಂದ ಎಲ್ಲೇಲ್ಲಿ ವರ್ಗಾವಣೆ ಆಗಿದ್ದರು ಅಲ್ಲೆಲ್ಲಿ ನಮ್ಮ ವಿಧ್ಯಾಭ್ಯಾಸ ಆಗಿರುತ್ತದೆ.

ದಾವೆಯನು ದಾಖಲು ಮಾಡುವ ಸಮಯದಲ್ಲಿ ನಾನು ಮತ್ತು ಇತರೆ ವಾದಿಗಳು ಸೇರಿ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ನನ್ನ ತಂದೆ ದಿನಾಂಕ 27.12.2007 ರಂದು ಮರಣ ಹೊಂದಿರುತ್ತಾರ. ನನ್ನ ತಂದೆ ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ. ನನ್ನ ತಂದೆ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದು ಜೈಲ್ ವಾರ್ಡನ ಆಗಿದ್ದರು. ನನ್ನ ತಂದೆ ಯಾವಾಗ ಸೇವೆ ಸೇರಿರುತ್ತಾರೆ ಎಂದು ನನಗೆ ಗೊತ್ತಿಲ್ಲಾ ಆದರೆ 1993 1994 ನೇ ಸಾಲಿನಲ್ಲಿ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದುವ ಸಮಯಕ್ಕೆ ಅವರ ವಯಸ್ಸು 70-75 ಇದ್ದಿರಬಹುದು. ನನ್ನ ತಂದೆ ನಿವೃತ್ತಿ ಹೊಂದಿದ ಬಳಿಕ 10-12 ವರ್ಷ ಬದುಕಿದ್ದರು.

ನನ್ನ ಅಜ್ಜ ಗೌಡಯ್ಯನಿಗೆ ನನ್ನ ತಂದೆ ಒಬ್ಬರೇ ಮಗನಾಗಿರುತ್ತಾನೆ. ನನ್ನ ತಂದೆ ಜೀವತ ವಿದ್ದಾಗ ನಮ್ಮ ವಿದ್ಯಾಭ್ಯಾಸ ಮತ್ತು ಮನೆಯ ಖರ್ಚು ವೆಚ್ಚಗಳನ್ನು ಹಾಗೂ ಜವಾದ್ದಾರಿಗಳನ್ನು ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ಪೋಲಿಸ್ ಇಲಾಖೆಯಲ್ಲಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ನನ್ನ ಜನನದ ಸಮಯದಲ್ಲಿ ನನ್ನ ತಂದೆ ಪೋಲಿಸ್ ಇಲಾಖೆಗೆ ಸೇರಿದ್ದರು. ನನಗೆ 18 -20 ವರ್ಷವಾದಾಗ ನನಗೆ ವ್ಯಾವಹಾರಿಕ ಜ್ಞಾನ ಬಂದಿರುತ್ತದೆ. ನಾನು ಹುಟ್ಟಿದ್ದು ತುಮಕೂರಿನಲ್ಲಿ ಬೆಳದಿದ್ದು ಕೋಲಾರ, ಹಾಸನ ಮತ್ತು ಬೆಂಗಳೂರು ಆಗಿರುತ್ತದೆ. ನನ್ನ ತಂದೆ ಅವರ ಸೇವೆಯನ್ನು ತುಮಕೂರು ಕೋಲಾರ ಹಾಸನ ಬೆಂಗಳೂರಿನಲ್ಲಿ ಸಲ್ಲಿಸಿರುತ್ತಾರೆ.

ನಾನು ಮತ್ತು ಇತರ ವಾದಿಗಳು ಪ್ರತಿವಾದಿಗಳ ವಿರುದ್ದ ನಮ್ಮ ಆಸ್ತಿಯನ್ನು ಬಿಟ್ಟು ಕೊಡುವಂತೆ ಕೇಸನ್ನು ಹಾಕಿರುತ್ತೇವೆ. ನಾನು ದಾವೆಯನ್ನು ಪೋಸ್ಟ್ ರಂಗಯ್ಯ ಅವರ ಮಕ್ಕಳಾದ ಪುಟ್ಟ ರಂಗಯ್ಯ,ಬೆಟ್ಟರಂಗಯ್ಯ, ತಮ್ಮಗೌಡ ಮತ್ತು ಸಿದ್ದಲಿಂಗಯ್ಯ ಅವರ ಮಕ್ಕಳಾದ ಕೃಷ್ಣಪ್ಪ ಮತ್ತು ಉಳಿದ ಮಕ್ಕಳ ವಿರುದ್ದ ದಾಖಲು ಮಾಡಿರುತ್ತೇನೆ. ಅವರು ಹೆಸರುಗಳು ಗೊತ್ತಿಲ್ಲ. ಶಿವಮ್ಮಾ ಉದಯ ಇತರರು ವಿರುದ್ದ ದಾಖಲು ಮಾಡಿರುತ್ತೇನೆ. ದಾವೆಯನ್ನು ಒಟ್ಟು 6 ಆಸ್ತಿಗಳಿಗೆ ಕೇಸನ್ನು ದಾಖಲು ಮಾಡಿರುತ್ತೇನೆ. ಅವುಗಳ ಸರ್ವೆ ನಂ. 115/8 ವಿಸ್ತೀರ್ಣ 8 ಗುಂಟೆ, 115/12 ವಿಸ್ತೀರ್ಣ 6 ಗುಂಟೆ, 116/1 1 ಎಕರೆ 4 ಗುಂಟೆ, 140/1 2 ಎಕರೆ 2 ಗುಂಟೆ, ಮತ್ತು 147/2 1 ಎಕರೆ 17 ಗುಂಟೆ ಆಗಿರುತ್ತದೆ. 147/2 1 ಎಕರೆ 17 ಗುಂಟೆ ಚಕ್ ಬಂದಿ ನನಗೆ ಗೊತ್ತಿಲ್ಲ .

ಸರ್ವೆ ನಂ 147/2 ದಾಖಲೆಗಳನ್ನು 2010 ರಲ್ಲಿ ಪರಿಶೀಲನೆ ಮಾಡಿರುತ್ತೇನೆ. ಸದರಿ ಸರ್ವೆ ನಂ. ನ ಈಸಿ, ಎಂ.ಆರ್ , ಪಹಣಿ ಪತ್ರಿಕೆ ಮತ್ತು ಕ್ರಯ ಪತ್ರವನ್ನು ನೋಡಿರುತ್ತೇನೆ. ನಾನು ದಾಖಲೆಗಳನು ನೋಡಿದಾಗ ಅವುಗಳನ್ನು ಸಿದ್ದಲಿಂಗಯ್ಯಅವರ ಮಗ ಕೃಷ್ಣಪ್ಪ ಅವರ ಹೆಸರಿಗೆ ಇದ್ದವು ಕ್ರಯ ಪತ್ರ ಸಿದ್ದಲಿಂಗಯ್ಯ ಅವರ ಹೆಸರಿಗೆ ಇತ್ತು. ನಾನು ನೋಡಿದ ಕ್ರಯ ಪತ್ರ ನನ್ನ ತಂದೆ ಸಿದ್ದಲಿಂಗಯ್ಯ ಅವರಿಗೆ ಬರೆದು ಕೊಟ್ಟಂತೆ ಇತ್ತು . ಸಾಕ್ಷಿ ಸ್ವಇಚ್ಚೆಯಿಂದ ನನ್ನ ತಂದೆ ಯಾವುದೇ ಕ್ರಯ ಪತ್ರ ಬರೆದು ಕೊಟ್ಟಿಲ್ಲಾ ಮತ್ತು ದಾಖಲೆಗಳು ನನ್ನ ತಾತನ ಹೆಸರಿಗೆ ಇದ್ದವು ಇಂದು ಹೇಳುತ್ತೇನೆ. ಅದೇ ರೀತಿ ಈಸಿ ಯಲ್ಲೂ ಸಹ ಸರ್ವೆ ನಂ 147/2 ಜಮೀನು ನನ್ನ ತಂದೆ

ಸಿದ್ದಲಿಂಗಯ್ಯ ಅವರಿಗೆ ಬರೆದು ಕೊಟ್ಟ ಬಗ್ಗೆ ಬರೆದಿತ್ತು. ನಾನು ನೊಂದಣಿ ಕಛೇರಿಯಲ್ಲಿ ಕ್ರಯ ಪತ್ರದ ದೃಢೀಕೃತ ನಕಲನ್ನು ಪಡೆದು ಅದನ್ನು ಓದಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ಸಿದ್ದಲಿಂಗದ್ ಯ್ಯನಿಗೆ ಭೋಗ್ಯವಾದ ಬಗ್ಗೆ ಬರೆದಿತ್ತು. ಸಾಕ್ಷಿ ಸದರಿ ಕ್ರಯ ಪತ್ರ ಕೊಟ್ಟಿ ಇರುತ್ತದೆ ಎಂದು ಹೇಳುತ್ತಾರೆ. ಕ್ರಯ ಪತ್ರದಲ್ಲಿ ನಮೂದು ಇರುವ ಭೋಗ್ಯಪತ್ರದ ಪ್ರತಿಯನ್ನು ನಾನು ಪಡೆದಿರುವುದಿಲ್ಲ. ನಿ.ಪಿ. 10 ದಾಖಲೆಯನ್ನು ದಿ. 12.08.2010 ರಂದು ನೊಂದಣಿ ಕಛೇರಿಯಲ್ಲಿ ಪಡೆದಿರುತ್ತೇನೆ.

ದಿಃ 24.05.1976 ರಂದು ದಾಖಲೆ ಆಗುವ ಸಮಯಲ್ಲಿ ನನ್ನ ತಂದೆ ತುಮಕೂರು ಜೈಲ್ಲಿನಲ್ಲಿ ವಾರ್ಡ್‌ನ ಆಗಿ ಸೇವೆ ಸಲ್ಲಿಸುತ್ತಿದ್ದರು. ನಿ.ಪಿ. 10 ದಾಖಲೆಯ ನೊಂದಣಿ ಸಂಖ್ಯೆ 556/1976-77 ಆಗಿರುತ್ತದೆ ಎಂದರೇ ಸರಿ. ಕ್ರಯ ಪತ್ರದಲ್ಲಿ ಭೊಗ್ಯವನ್ನು ಸಿದ್ದಲಿಂಗಯ್ಯ ಅವರಿಗೆ ಬರೆದು ಕೊಟ್ಟ ಬಗ್ಗೆ ನಮೂದು ಇತ್ತ ಅಥವಾ ಬೇರೆಯವರಿಗೆ ಬರೆದು ಕೊಟ್ಟ ಬಗ್ಗೆ ನಮೂದು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ 147/2 ಭೊಗ್ಯವಾದ ಬಗ್ಗೆ ಮಾತ್ರ ನಮೂದು ಇತ್ತು . ಯಾವ ಉದ್ದೇಶಕ್ಕಾಗಿ ಭೊಗ್ಯ ಮಾಡಿದ್ದಾರೆ ಎಂದು ಕ್ರಯ ಪತ್ರದಲ್ಲಿ ನಮೂದು ಇತ್ತು ಎಂದರೆ ಸಾಕ್ಷಿ ಮಕ್ಕಳ ವಿಧ್ಯಾಭ್ಯಾಸ ಮತ್ತು ಮನೆಯ ಖರ್ಚಿಗಾಗಿ ಭೊಗ್ಯ ಮಾಡಿದ ಬಗ್ಗೆ ಇತ್ತು ಎಂದು ಹೇಳುತ್ತಾರೆ. ಸಾಕ್ಷಿ ಸ್ವ ಇಚ್ಚೆಯಿಂದ ನನ್ನ ತಂದೆ ಕೆಲಸದಲ್ಲಿ ಇದ್ದ ಕಾರಣ ಆ ರೀತಿ ಬರೆಯುವ ಸಂದರ್ಭ ಇರಲಿಲ್ಲವೆಂದು ಹೇಳುತ್ತಾರೆ. ಸದರಿ ಕ್ರಯ ಪತ್ರದಲ್ಲಿ 6000/- ಮೊಬಲಗವನ್ನು ತೋರಿಸಲಾಗಿತ್ತು. ಕ್ರಯ ಪತ್ರದಲ್ಲಿ ಅದೇ ದಿನವೇ ಹಣವನ್ನು ನೀಡಿದ ಬಗ್ಗೆ ನಮೂದು ಇತ್ತು. ಸದರಿ ಕ್ರಯ ಪತ್ರದಲ್ಲಿ ಭೊಗ್ಯದ ಸಮಯದಲ್ಲಿಯೇ ಸ್ವಾಧೀನವನ್ನು ಬಿಟ್ಟು ಕೊಟ್ಟ ಬಗ್ಗೆ ನಮೂದು ಇತ್ತು. ಭೊಗ್ಯ ಎಷ್ಟು ರೂಗಳಿಗೆ ಇತ್ತು ಎಂದು ನಾನು ನೋಡಿರುವುದಿಲ್ಲ. ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಯಾರೂ ಸಹಿ ಮಾಡಿರುತ್ತಾರೆ ಎಯಿ ನಾನು ನೋಡಿಲ್ಲವೆಂದು ಹೇಳುತ್ತಾರೆ. ನನ್ನ ತಂದೆ ವಿಧ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಸಾಕ್ಷಿ ಸಹಿಯನ್ನು ಮಾತ್ರ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ಸಹಿಯನ್ನು ಅವರ ಸೇವಾ ಪುಸ್ತಕದಲ್ಲಿ ನೋಡಿದ್ದು ಉಳಿದ ದಾಖಲೆಗಳಲ್ಲಿ ನೋಡಿರುವುದಿಲ್ಲ. ನನ್ನ ತಂದೆ ಸೇವಾ ದಾಖಲ ನನ್ನ ಬಳಿ ಇದೆ ಅದನ್ನು ಮುಂದಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ನನ್ನ ತಂದೆಯ ಸಹಿಯನ್ನು ನಾನು ಗುರುತಿಸುತ್ತೇನೆ.

ಮುಂದುವರೆದ ಪಾಟೀ ಸವಾಲು ಕೋರಿಯ ಮೇರೆಗೆ ಮುಂದೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.